O.S 270/2008
PW-1

ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ದಿನಾಂಕಃ 26-02-2019.

*ಪಾಟೀ ಸವಾಲು ಶ್ರೀ ಕೆ.ಎನ್.ಎಸ್ ವಕೀಲರಿಂದ*

ಈ ದಾವೆಯನ್ನು ಭಾಗಂಶ ಕೋರಿ ಸಲ್ಲಿಸಿದ್ದೇನೆ ಅದರೆ ಎಷ್ಟು ಸ್ವತ್ತುಗಳಿಗೆ ಸಲ್ಲಿಸಿದ್ದೇನೆ ಎಂದು ಗೊತ್ತಿಲ್ಲ. ದಾವ ಸ್ವತ್ತುಗಳ ಸರ್ವೆ ನಂಬರ್ ಮತ್ತು ಚೆಕ್ಕುಬಂಧಿ ಗೊತ್ತಿಲ್ಲ. ದಾವ ಸ್ವತ್ತುಗಳು ಯಾರ ಯಾರ ಹೇಸರಿನಲ್ಲಿ ಇದೆ ಎಂದರೆ ಸಾಕ್ಷಿಯು ವೆಂಕಟೇಗೌಡರ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ. ನಿಪಿ-1 ಯಾರ ಹೆಸರಿನಲ್ಲಿ ಇದೆ ಎಂದು ಗೊತ್ತಿಲ್ಲ. ನಿಪಿ-1 ರಲ್ಲಿ ನಮೂದಾಗಿರುವ ಸ್ವತ್ತು ಗೋವಿಂದೇಗೌಡ ಬಿನ್ ರಂಗೇಗೌಡರ ಹೆಸರಿಗೆ ಹೇಗೆ ಹೋಗಿದೆ ಎಂದು ಗೊತ್ತಿಲ್ಲ. ಗೊವಿಂದೇಗೌಡರ ಹೆಸರಿಗೆ ಆಗಿರುವ ಖಾತೆಯನ್ನು ನಾನು ಪ್ರಶ್ನೆ ಮಾಡಿಲ್ಲ.

ವೆಂಕಟೇಗೌಡರಿಗೆ ಪಿತ್ರಾರ್ಜಿತವಾಗಿ ಬಂದಿದೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿದ್ದೇನೆ. ಪಿತ್ರಾರ್ಜಿತ ಆಸ್ತಿಯನ್ನು ತೋರಿಸಲು ಯಾವುದೇ ದಾಖಲೆಗಳನ್ನು ಹಾಜುರಪಡಿಸಿಲ್ಲ ಎಂದರೆ ಸರಿಯಲ್ಲ. ದಾವ ಸ್ವತ್ತುಗಳು ವೆಂಕಟೇಗೌಡ ಮತ್ತು ರಂಗೇಗೌಡರ ನಡುವೆ 50 ವರ್ಷಗಳ ಹಿಂದೆ ಭಾಗವಾಗಿದೆ ಎಂದರೆ ಸರಿ. ಸದರಿ ವಿಭಾಗವಾಗುವ ಸ್ವತ್ತುಗಳ ಪೈಕಿ 1 ನೇ ಪ್ರತಿವಾದಿ ದಿಃ17-1-1985 ರಲ್ಲಿ ಚಂದ್ರು ಮತ್ತು ಗೋವಿಂದರವರಿಗೆ ವಿಲ್ ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವ ಸ್ವತ್ತುಗಳು 1 ನೇ ಪ್ರತಿವಾದಿಗೆ ಸೇರಿದ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ಉತ್ತರಾಧಿಕ್ರಿಯೆಯನ್ನು ಚಂದ್ರುರವರು ಮಾಡಿದ್ದಾರೆ ಎಂದರೆ ಸಾಕ್ಷಿಯು ನಾವು ಮಾಡಿದ್ದೇವೆ ಎಂದು ನುಡಿಯುತ್ತಾರೆ. ನನ್ನ ತಂದೆ ಚಂದ್ರು ಮತ್ತು ಗೊವಿಂದರವರನ್ನು ದತ್ತು ಸ್ವೀಕರ ಮಾಡಿದರು ಎಂದರೆ ಸರಿಯಲ್ಲ. ವೆಂಕಟೇಗೌಡ ಮತ್ತು ಹೊಂಬಳಮ್ಮರವರನ್ನು ಚಂದ್ರು ಮತ್ತು ಗೋವಿಂದ ನೋಡಿಕೊಂಡು ಬರುತ್ತಿದ್ದರು ಎಂದರೆ ಸಾಕ್ಷಿಯು ಅವರು ಸಹ ಇದ್ದರು ನಾವು ಸಹ ನೋಡಿಕೊಳ್ಳುತ್ತಿದ್ದೇವು ಎಂದು ನುಡಿಯುತ್ತಾರೆ.

1985 ನೇ ಸಾಲಿನಲ್ಲಿ ವಿಲ್ ಬರೆದಿರುವುದರಿಂದ ದಾವ ಸ್ವತ್ತುಗಳಲ್ಲಿ ಯಾವುದೇ ಭಾಗಾಂಶ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

O.S 270/2008
PW-1

ಮರುವಿಚಾರಣೆ ಇಲ್ಲ:-

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇ.ಎ.ಒ.ಸ.ಮಾ,**

***(ಎಸ್.ಚಿನ್ನಸ್ವಾಮಿ)***
**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಚನ್ನರಾಯಪಟ್ಟಣ**